## ಸಾಹಿತ್ಯದ ರುಚಿ

**ಚಂ**ದನ ವಾಹಿನಿ ತನ್ನ ಶುಭೋದಯ ಕಾರ್ಯಕ್ರಮದಲ್ಲಿ ಕನ್ನಡ ನಾಡಿನ ಖ್ಯಾತ ಕವಿಗಳನ್ನು, ಕಲಾವಿದರನ್ನು ಗುರುತಿಸಿ, ಪರಿಚಯಿಸುವ ಕಾರ್ಯವನ್ನು ಮಾಡುತ್ತಿದೆ. ಇತ್ತೀಚೆಗೆ ನಾಲ್ಕು ಬಾರಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದ ಜಯಂತ ಕಾಯ್ಕಿಣಿಯವರನ್ನು ಪರಿಚಯಿಸಿದ್ದು ಬಹಳ ಮೆಚ್ಚುಗೆಯಾಯಿತು. ಕವಿಯಾಗಿ, ಕಥೆಗಾರನಾಗಿ, ಚಿತ್ರ ಸಾಹಿತಿಯಾಗಿ ಮತ್ತು ಅಂಕಣಕಾರನಾಗಿ ಪ್ರಸಿದ್ಧರಾದ ಕಾಯ್ಕಿಣಿ ನಗುತ್ತಲೇ ತಮ್ಮ ಜೀವನ ಚಿತ್ರಣದ ಜೊತೆ ಸಾಹಿತ್ಯದಲ್ಲಿ ಮೂಡಿಸಿದ ಹೆಜ್ಜೆಗಳ ಸಮಗ್ರ ಮಾಹಿತಿ ನೀಡಿದರು.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ವಾರದ ಪತ್ರ: ಇವು ಜನೋಪಯೋಗಿಯೇ?

ಇತ್ತೀಚೆಗೆ ಕನ್ನಡ ದೃಶ್ಯ ಮಾಧ್ಯಮದಲ್ಲಿ ಹೊಸ ಕ್ರಾಂತಿ ಉಂಟಾಗುತ್ತಿದೆ. ದಿನಕ್ಕೊಂದು ಹೊಸ ನ್ಯೂಸ್ ಚಾನೆಲ್ ಆರಂಭಗೊಳ್ಳುತ್ತಿದೆ. ಆರಂಭದಲ್ಲಿ ಏನೇನೊ ಹೊಸ ಆಶಯ, ಹೊಸ ಮನ್ವಂತರ ಸೃಷ್ಟಿಸುತ್ತೇವೆಂದು ಭ್ರಮೆ ಹುಟ್ಟಿಸುವ ಚಾನೆಲ್‌ಗಳು ಕೊನೆಗೆ ಒಂದೇ ರೀತಿ ಕಾರ್ಯನಿರ್ವಹಿಸುತ್ತವೆ. ಬ್ರೇಕಿಂಗ್ ನ್ಯೂಸ್ ಕೊಡುತ್ತೇವೆಂದು ಯಾವುದೋ ಉಪಯೋಗಕ್ಕೆ ಬಾರದ ವಿಷಯಗಳ ಬಗ್ಗೆ ಇಡೀ ದಿನವನ್ನು ವ್ಯರ್ಥ ಮಾಡುತ್ತವೆ. ನಾವು ಸುಳ್ಳು ಹೇಳುವುದಿಲ್ಲ, ಬದಲಾವಣೆ ನಮ್ಮಿಂದಲೇ ಎನ್ನುವ ಚಾನೆಲ್‌ಗಳು ಸತ್ಯವನ್ನು ಹೇಳುವುದಿಲ್ಲ. ಬದಲಾವಣೆಯೂ ಆಗುವುದಿಲ್ಲ. ಇವು ಜನೋಪಯೋಗಿ ಆಗುವುದು ಯಾವಾಗ?

—ಬಿಲ್ಲೇಶ್ವರ ಅಚ್ಚು, ಹುಂಚ

## ಸರಿಗಮಪ.. ತಿದ್ದಿಕೊಳ್ಳಲಿ

**ಝೀ** ವಾಹಿನಿಯಲ್ಲಿ ಪ್ರಸಾರವಾಗುತ್ತಿದ್ದ ಸರಿಗಮಪ–14ರ ಸೀಸನ್ ಮುಕ್ತಾಯಗೊಂಡಿದ್ದು ವಿಶ್ವಪ್ರಸಾದ್ ತನ್ನ ಗಾಯನದ ಮೂಲಕ ನಿರೀಕ್ಷೆಯಂತೆ ಪ್ರಥಮ ಸ್ಥಾನ ಪಡೆದ. ತೇಜಸ್ ಶಾಸ್ತ್ರಿಗೆ ನಾಲ್ಕನೆಯ ಸ್ಥಾನ ನೀಡಿ, ಕೀರ್ತನಾ, ಜ್ಞಾನೇಶ್‌ಗೆ ದ್ವಿತೀಯ ಸ್ಥಾನ ನೀಡಿ ಮೂರನೇ ಸ್ಥಾನ ರದ್ದು ಮಾಡಿದುದಾಗಿ ಘೋಷಿಸಲಾಯಿತು. ತೇಜಸ್ ಶಾಸ್ತ್ರಿಗೆ ನಾಲ್ಕನೆಯ ಸ್ಥಾನದ ಬದಲು ಮೂರನೇ ಸ್ಥಾನವನ್ನು ನೀಡಬಹುದಿತ್ತು ಎನಿಸಿತು. ಇದೇ ಅನಿಸಿಕೆ ಹಲವಾರು ವೀಕ್ಷಕರಿಗೆ ಇರಬಹುದು.

ಈ ಸ್ಪರ್ಧೆಯಲ್ಲಿ ಅಂತಿಮ ಆಯ್ಕೆಗೆ ಜನರಿಗೆ ವೋಟಿನ ಅವಕಾಶ ನೀಡಲಾಯಿತು. ಆಗ ಜಾತಿ, ಪ್ರಾಂತ್ಯ, ಬಣ್ಣ, ಗಿಮಿಕ್ ಆಧಾರದಲ್ಲಿ ವೋಟ್ ಮಾಡಿರಬಹುದು. ಇದು ನ್ಯಾಯಕ್ಕೆ ಎಸಗಿದ ಅಪಚಾರ. ಇನ್ನು ಮುಂದಾದರೂ ನಿರ್ಣಾಯಕರ ಸೀಟ್‌ನಲ್ಲಿ ಕುಳಿತವರು ತೀರ್ಪು ನೀಡಲಿ.

ಮಕ್ಕಳು ತನ್ಮಯತೆಯಿಂದ ಭಾವಪರವಶರಾಗಿ ಹಾಡುತ್ತಿದ್ದರೆ ಅಲ್ಲಿರುವ ಸಭಿಕರು ಹಾಡಿನ ಮಧ್ಯೆ ಶಿಳ್ಳೆ, ಚಪ್ಪಾಳೆ ಹಾಕಿ ರಸಭಂಗ ಮಾಡುವುದರ ಜೊತೆಗೆ ಹಾಡುವ ಮಕ್ಕಳ ಏಕಾಗ್ರತೆಗೂ ಭಂಗ ತರುತ್ತಾರೆ. ಈ ಸಭಿಕರಿಗೆ ತಮ್ಮ ತಪ್ಪು ಅರಿವಾಗುವುದೆಂದು?

—ವಿಭಾ ಮುರಳೀಧರ್, ತುಮಕೂರು; ಎಂ.ಮೃತ್ಯುಂಜಯಪ್ಪ, ಚಿತ್ರದುರ್ಗ; ಪಿ.ಜೆ. ರಾಘವೇಂದ್ರ, ಮೈಸೂರು

## ಮನ ತಣಿಸಿದ ಸರಿಗಮಪ...

ಝೀ ಟಿವಿಯ ಸರಿಗಮಪ ಸುಮಧುರ ಸ್ವಪ್ನವೆಂಬಂತಿತ್ತು. ಪುಟಾಣಿ ನೇಹ ನಿಜಕ್ಕೂ ಸರಸ್ವತಿಯೇ! ಉಳಿದ ಮಕ್ಕಳೂ ತುಂಬಾ ಚೆನ್ನಾಗಿ ಹಾಡಿ ಮನತಣಿಸಿದರು. ವಿ.ಪಿ.ಯವರ ತಾಯಿ, ಅರ್ಜುನ್ ಜನ್ಯರ ತಾಯಿ, ಮಹಾಗುರುಗಳ ಪತ್ನಿಯಿಂದ ಕಾರ್ಯಕ್ರಮಕ್ಕೊಂದು ಕಳೆ ಬಂದಿತ್ತು.

ಕೆಲವು ಅಪರೂಪದ ಹಾಡುಗಳು ಕೇಳಲು ಸುಮಧುರವಾಗಿದ್ದವು. ಅಂತಿಮ ಹಂತದ ನೇರ ಪ್ರಸಾರ ಮುದ ನೀಡಿತು.

ಪ್ರಥಮ ಸ್ಥಾನ ಪಡೆದ ವಿಶ್ವಪ್ರಸಾದ್, ಎರಡನೇ ಸ್ಥಾನ ಪಡೆದ ಕೀರ್ತನ ಮತ್ತು ಜ್ಞಾನೇಶ, ಗುರುವಿಲ್ಲದೇ ಸ್ವಪ್ರಯತ್ನದಿಂದ ಕಲಿತು ಮನ್ನಣೆ ಪಡೆದ ತೇಜಸ್ ಶಾಸ್ತ್ರಿಗೆ ಅಭಿನಂದನೆಗಳು. ಎಸ್‌ಎಂಎಸ್ ವೋಟ್‌ಗಳನ್ನು ತೋರಿಸಿದ್ದರೆ ಪಾರದರ್ಶಕತೆ ಇರುತ್ತಿತ್ತು. ಪ್ರತಿ ವಾರ ಎಲಿಮಿನೇಶನ್ ಇದ್ದರೆ ಸ್ಪರ್ಧೆ ಬಿಗಿಯಾಗಿ ಪ್ರೇಕ್ಷಕರಿಗೂ ಉತ್ಸಾಹ, ನಿರೀಕ್ಷೆ ಜಾಸ್ತಿ ಇರುತ್ತದೆ.

—ಅನಾಮಿಕಾ, ಮೈಸೂರು; ವೀಣಾ ಶಂಕರ್ ಬೆಂಗಳೂರು; ಕೆ.ಎನ್.ಪ್ರಭಾಕರ ಗುಪ್ತ; ಸೀತಾ ಕೇಶವ, ಸಿಡ್ನಿ

## ಚೊಕ್ಕಟವಾದ ನಿಗೂಢ...

ಝೀನಲ್ಲಿ ಪ್ರಸಾರವಾಗುತ್ತಿದ್ದ ಮಾಸ್ಟರ್ ಆನಂದ್‌ರವರ ನಿಗೂಢ ರಾತ್ರಿ ಚೆನ್ನಾಗಿತ್ತು. ಚಿಕ್ಕದಾಗಿ, ಚೊಕ್ಕಟವಾಗಿ ನೋಡುಗರಿಗೆ ಬೇಜಾರು ಬರದಂತೆ ಒಂದೇ ಮನೆ, ಒಂದೇ ಕುಟುಂಬದಲ್ಲಿ ನಡೆಸಿಕೊಂಡು ಹೋದ ಧಾರಾವಾಹಿ.

ಧಾರಾವಾಹಿ ವಾಸ್ತವಿಕತೆಗೆ ತುಂಬಾ ಹತ್ತಿರವಾಗಿತ್ತು. ದೇವರು, ದೆವ್ವ, ಭೂತ, ಪ್ರೇತ, ಮಾಟ–ಮಂತ್ರವೆಂಬ ಕಲ್ಪನೆಗಳನ್ನು ಮುಗ್ಧರ ಮನಸ್ಸಿನಲ್ಲಿ ಮೂಡಿಸಿ, ಅವರಲ್ಲಿ ಭಯ ಹುಟ್ಟಿಸಿದ ಜಾಣರು ತಮ್ಮ ತಮ್ಮ ಬೇಳೆ ಬೇಯಿಸಿಕೊಳ್ಳುವ ಪರಿಯನ್ನು ತುಂಬಾ ಚೆನ್ನಾಗಿ ತೋರಿಸಲಾಯಿತಲ್ಲದೇ, ಕೊನೆಯವರೆಗೂ ಅಪರಾಧಿ ಯಾರೆಂಬ ನಿಗೂಢವನ್ನು ಕಾಪಾಡುವಲ್ಲಿ ಯಶಸ್ವಿಯಾಯಿತು. ಕೆಲವೆಡೆ ಕಥೆ ನಿಧಾನಗತಿಯಲ್ಲಿ ಸಾಗಿತೆನಿಸಿತು, ಆದರೆ ಕುತೂಹಲವನ್ನು ಹಾಗೇ ಉಳಿಸಿಕೊಂಡಿತು.

—ಎ.ಶಾರದ ಕೊಟ್ಟೂರು, ಕೆ.ಸಿ.ರತ್ನಶ್ರೀ ಶ್ರೀಧರ್ ಬೆಂಗಳೂರು

## ಸಿನೆಮಾ ನಕಲು?

ಈ ವಾರ ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ 'ಪುಟ್ಟಗೌರಿ ಮದುವೆ' ಧಾರಾವಾಹಿಯ ಬಹುತೇಕ ದೃಶ್ಯಗಳು ರವಿಚಂದ್ರನ್ ನಟಿಸಿರುವ 'ದೃಶ್ಯಂ' ಚಿತ್ರದಂತೆ ಇವೆ. ಅಲ್ಲದೆ ಅದೇ ಹಾದಿಯಲ್ಲಿ ಸಾಗುವ ಲಕ್ಷಣಗಳೂ ಗೋಚರಿಸುತ್ತವೆ. ಅಲ್ಲಿ ನೋಡಿದ ಕತೆಯನ್ನೇ ಇಲ್ಲಿಯೂ ನೋಡುವ ಅನಿವಾರ್ಯ ಕರ್ಮ ಸೃಷ್ಟಿಸದೇ ಬೇರೆ ಹಾದಿಯಲ್ಲಿ ನಡೆಯಲಿ. ಹಾಗೆಯೆ ಈ ಕತೆಗೊಂದು ಅಂತ್ಯ ಕಾಣಿಸಿ ವೀಕ್ಷಕರ ಅಗಾಧ ತಾಳ್ಮೆಗೂ ಮುಕ್ತಿ ಕಾಣಿಸಿ.

– ಪತ್ತಂಗಿ ಎಸ್. ಮುರಳಿ, ಬೆಂಗಳೂರು

## ಧಾರಾವಾಹಿ ಮತ್ತು ಅವರೇ...

ಟಿವಿಯಲ್ಲಿ ಯಾವುದೇ ಧಾರಾವಾಹಿ ನೋಡಿದರೂ ಮಾತು ಮಾತಿಗೆ ಅವರೇ ಅವರೇ ಎನ್ನುವ ಪದ ಪದೇ ಪದೇ ಮರುಕಳಿಸುತ್ತದೆ. ಉದಾ: ಅಂಜಲಿ ಅವರೇ... ರಾಧಿಕಾ ಅವರೇ.. ಜಾನಕಿ ಅವರೇ... ಹೀಗೆ ಅವರೇ ಅವರೇ ಎನ್ನುವ ಪದ ಬಳಸದೇ ಮಾತನಾಡಲು ಆಗುವುದಿಲ್ಲವೇ?

—ಎಸ್.ಎನ್. ಕೃಷ್ಣಮೂರ್ತಿ, ಕಡೂರು

## ಟಿವಿ ಜ್ಯೋತಿಷಿಗಳು

ವಿಧಾನ ಸಭೆ ಚುನಾವಣೆಯಲ್ಲಿ ಜ್ಯೋತಿಷಿಗಳು ಟಿವಿ ಸ್ಟುಡಿಯೋದಲ್ಲಿ ಭವಿಷ್ಯ ನುಡಿದಿದ್ದರು. ಆದರೆ ಅವರು ಭವಿಷ್ಯ ನುಡಿದಂತೆ ಕಾಣಲಿಲ್ಲ. ಯಾವ ಪಕ್ಷಕ್ಕೆ ಎಷ್ಟು ಸ್ಥಾನಗಳು, ಯಾರಿಗೆ ಬಹುಮತ, ಯಾರಿಗೆ ಮುಖ್ಯಮಂತ್ರಿ ಗದ್ದುಗೆ, ಹೊಸ ಸರ್ಕಾರದ ಸಂಭವನೀಯ ಆಯುಷ್ಯ ಮುಂತಾದ ನೇರ ಪ್ರಶ್ನೆಗಳಿಗೆ ಬಹುತೇಕ ಸಂದರ್ಭಗಳಲ್ಲಿ ನೇರವಾದ ಉತ್ತರ ದೊರಕಲಿಲ್ಲ. ಸಾಮಾನ್ಯರಿಗೆ ಗೊತ್ತಾಗದ ಗ್ರಹಗಳ ಚಲನವಲನ, ಅವುಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ಶಕ್ತಿ ಎಲ್ಲೂ ಸರಿಯಾಗಲಿಲ್ಲ.

—ರಮಾನಂದ ಶರ್ಮಾ, ನವದೆಹಲಿ